ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: ಕಾಶಿಇ/212/ಸಪ್ರಾನೇಬ/2016-17/ನೇವಿ-1

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ: 07.08.2017.

# ಸುತ್ತೋಲೆ

ವಿಷಯ: ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ವಿವಿಧ ವಿಷಯಗಳ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಆಯ್ಕೆಯಾಗಿರುವ ಅಭ್ಯರ್ಥಿಗಳ ಸ್ಥಳನಿಯುಕ್ತಿ ಕೌನ್ಸಿಲಿಂಗ್ ಬಗ್ಗೆ.

ಉಲ್ಲೇಖ 1) ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ/128/ಡಿಸಿಇ/2017(1-23), ದಿನಾಂಕ:15.07.2017

2) ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ/128/ ಡಿಸಿಇ/2017(1)(2)(3)(4)(6) (7)(8)(9)(10)(12)(14) (15)(16)(17)(18)(19)(20) ಮತ್ತು (22) ದಿನಾಂಕ:05.08.2017.

3) ಈ ಕಛೇರಿ ಸುತ್ತೋಲೆಯ ಸಂಖ್ಯೆ:ಕಾಶಿಇ/137/ಸಪ್ರಾನೇಬ/2017-18/ನೇವಿ-1, ದಿನಾಂಕ:04.08.2017.

*****

ಉಲ್ಲೇಖ(1) ಹಾಗೂ (2)ರ ಸರ್ಕಾರದ ಅಧಿಸೂಚನೆಯಲ್ಲಿ ವಿವಿಧ ವಿಷಯಗಳ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ನೇಮಕಾತಿ ಹೊಂದಿರುವ ಅಭ್ಯರ್ಥಿಗಳಿಗೆ ಉಲ್ಲೇಖ(3)ರ ಸುತ್ತೋಲೆಯಲ್ಲಿ ಕೌನ್ಸಿಲಿಂಗ್‌ಗೆ ಹಾಜರಾಗುವಂತೆ, ತಿಳಿಸಲಾಗಿದೆ. ಕೌನ್ಸಿಲಿಂಗ್‌ನ್ನು ಅಭ್ಯರ್ಥಿಗಳ ಪ್ರತಿಭಾ ಪಟ್ಟಿ ಆಧಾರದ ಮೇಲೆ ನಡೆಸಲಾಗುವುದು. "ಹಿಂದುಳಿದ ಮತ್ತು Low GER" ಪ್ರದೇಶಗಳಿಗೆ ಪ್ರಾಧ್ಯತೆ ನೀಡುವ ಸಲುವಾಗಿ ಪ್ರಥಮವಾಗಿ "ಸಿ" ವಲಯದ ಖಾಲಿ ಹುದ್ದೆಗಳನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶವಿರುತ್ತದೆ. "ಸಿ" ವಲಯ ಖಾಲಿ ಹುದ್ದೆಗಳು ಭರ್ತಿಯಾದ ನಂತರ "ಬಿ" ವಲಯದ ಖಾಲಿ ಹುದ್ದೆಗಳನ್ನು ಆಯ್ಕೆಮಾಡಿಕೊಳ್ಳಲು ಅವಕಾಶ ನೀಡಲಾಗುವುದು. ಹಾಗೆಯೇ "ಬಿ" ವಲಯದ ಹುದ್ದೆಗಳು ಭರ್ತಿಯಾದ ನಂತರ "ಎ" ವಲಯದ ಖಾಲಿ ಹುದ್ದೆಗಳನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡಲಾಗುವುದು.

ಕೌನ್ಸಿಲಿಂಗ್‌ನಲ್ಲಿ ಅಭ್ಯರ್ಥಿಗಳಿಗೆ ಮಾತ್ರ ಪ್ರವೇಶಾತಿ ನೀಡಲಾಗುವುದು. ವಿಶೇಷ ಸಂದರ್ಭದಲ್ಲಿ ಮಾತ್ರ ಅಂತಹ ಅಭ್ಯರ್ಥಿಗಳ ಜೊತೆ ಒಬ್ಬರು ಸಹಾಯಕರಾಗಿ ಆಗಮಿಸಬಹುದಾಗಿದೆ.

ಕಾಲೇಜು ಶಿಕ್ಷಣ ಆಯುಕ್ತರು

**ಇವರಿಗೆ:**

1. ಉಲ್ಲೇಖ(1) ಹಾಗೂ (2)ರ ಸರ್ಕಾರಿ ಅಧಿಸೂಚನೆಯಲ್ಲಿನ ಅಭ್ಯರ್ಥಿಗಳಿಗೆ.
2. ಮಾಹಿತಿ ಅಧಿಕಾರಿಗಳು, ಕೇಂದ್ರ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು – ಸುತ್ತೋಲೆ ಹಾಗೂ ಅಧಿಸೂಚನೆಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸುವಂತೆ ಸೂಚಿಸಲಾಗಿದೆ.

**ಪ್ರತಿಯನ್ನು ಮಾಹಿತಿಗಾಗಿ:**

1. ಮಾನ್ಯ ಉನ್ನತ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು.
3. ಕಾಲೇಜು ಶಿಕ್ಷಣ ಇಲಾಖೆಯ ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ.
4. ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರುಗಳಿಗೆ.